# ತೃತೀಯ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 80** **ಮಾದರಿ ಪ್ರಶ್ನೆ ಪತ್ರಿಕೆ** **ಅವಧಿ : 2–30 ಗಂಟೆಗಳು**

**ಸೂಚನೆಗಳು :** ಪ್ರಶ್ನೆಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲೇ ಉತ್ತರ ಬರೆಯುವುದು ಕಡ್ಡಾಯ

## ಭಾಗ – 'ಎ'

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **10 * 1 = 10**

1. 'ಲಾಕಪ್ಪಿನಲ್ಲಿ ಒಂದು ರಾತ್ರಿ' ಪಾಠದ ಲೇಖಕರ ಜೇಬಿನಲ್ಲಿ ಏನು ಇತ್ತು?
2. ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರು ತಮ್ಮ ಸಮಸ್ಯೆಯನ್ನು ಯಾರ ಬಳಿ ಹೇಳಿಕೊಂಡರು?
3. ಕೋಗಿಲೆಯ ಗಾನವು ಮನುಜಲೋಕವನ್ನು ಏನಾಗಿ ಪರಿವರ್ತಿಸಿದೆ?
4. ಅಷ್ಟಾದಶಾಕ್ಷರೀ ಮಂತ್ರವು ಯಾವುದು?
5. ನಿಸಾರ್ ಅಹಮದ್ ಅವರು ತಮ್ಮ ಕವನದಲ್ಲಿ ಯಾರು ಯಾರಲ್ಲಿ ಹರಿವ ನೆತ್ತರೊಂದೆ ಎಂದಿದ್ದಾರೆ?
6. ಬಡತನಕ್ಕೆ ಯಾವ ಚಿಂತೆ ?
7. ಸನ್ಯಾಸಿ ವೇಷ ಧರಿಸಿದ ಸರದಾರನ ಹೆಸರೇನು?
8. ಕಸ್ತೂರಿಯವರ ಜೀವನದಲ್ಲಿ ಅತ್ಯಂತ ಬೆರಗಿನ ಸಂಗತಿ ಯಾವುದು?
9. ಕವಿ ಪುಲಿಗೆರೆ ಸೋಮನಾಥರು ಯಾರನ್ನು ಹೆಂಡತಿಯಲ್ಲವೆಂದು ಹೇಳಿದ್ದಾರೆ?
10. ಶಿಲ್ಪಿ ಧರ್ಮಪದನು ವಿಶುವಿನ ಹತ್ತಿರಕ್ಕೆ ಏಕೆ ಬಂದನು?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

11. ಗೊ ರಾ ಅಯ್ಯಂಗಾರರು ಒಂದು ರಾತ್ರಿಯನ್ನು ಲಾಕಪ್ಪಿನಲ್ಲಿ ಕಳೆಯಲು ಕಾರಣವೇನು?
12. ಕರ್ನಾಟಕ ರಾಜ್ಯದ ಉದಯವಾದದ್ದು ಸಾರ್ಥಕವಾಗಬೇಕಾದರೆ ನಾವು ಏನು ಮಾಡಬೇಕೆಂದು ರಾಜರತ್ನಂ ಹೇಳಿದ್ದಾರೆ?
13. ಅನಿಲ ಕುಂಬ್ಳೆ ಅವರ ಬಾಲ್ಯ ಜೀವನವನ್ನು ತಿಳಿಸಿ.
14. ಕುಂಬ್ಳೆಯವರು ನಿವೃತ್ತರಾದ ಮೇಲೆ ತಮ್ಮನ್ನು ಯಾವ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು?
15. ಅಕ್ಷರವು ಹೇಗೆ ನಮಗೆ ಹೊಸ ಜೀವನ, ಹೊಸ ರೂಪ ಕೊಡುತ್ತದೆ?
16. ಮನುಷ್ಯನು ಹೊಸ ಮನುಷ್ಯನಾಗುವುದು ಹೇಗೆ?
17. ರಾಮಸಿಂಗನ ಕುಟುಂಬಕ್ಕೂ ಸ್ವಾತಂತ್ರ್ಯ ಸಂಗ್ರಾಮಕ್ಕೂ ಏನು ಸಂಬಂಧವಿತ್ತು?
18. ರೈತನು ದನಕರುಗಳು ಹೇಗಾದವೆಂದು ಮಳೆರಾಯನಲ್ಲಿ ನಿವೇದಿಸುತ್ತಾನೆ?
19. ಸ್ವಾತಿಮಳೆ ಸುರಿದಾಗ ರೈತನು ನಗಲು ಕಾರಣವೇನು?
20. ಬಿಸಿಲ ಸೀಮೆಯ ಜನರ ಸ್ವಭಾವ ಎಂತಹುದು?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ. 2 * 3 = 6**

21. "ಹೆಣ್ಣುಮಗಳೇ, ಆ ಧ್ವಜವನ್ನು ಮೊದಲು ಕೆಳಗಿಡು"

22. "ಕೇಡಾದರೆ ಮರಣದ ಚಿಂತೆ"

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ 2 * 3 = 6**

23. ಅ. ರಾ. ಮಿತ್ರ

24. ಚನ್ನವೀರ ಕಣವಿ

**ಕೆಳಗಿನ ಪದ್ಯಭಾಗವನ್ನು ಪೂರ್ಣಮಾಡಿರಿ 1 * 3 = 3**

25. ನಾವು ನೀವು ______________

______________________

______________________

__________________ ತೊಡಿರಿ ಇಂದೆ

**ಅಥವಾ**

ಕರ್ನಾಟಕ ವಂಗ _________________

________________________

________________________

________________ ಮುಗಿಲು ಒಂದೆ

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4 = 8**

26. ರಾಣಿ ಅಬ್ಬಕ್ಕ ದೇವಿ ಪೋರ್ಚುಗೀಸರ ವಿರುದ್ಧ ಹೋರಾಡಿದ್ದಕ್ಕೆ ಕಾರಣ ಹಾಗೂ ಅವರನ್ನು ಸೋಲಿಸಿದ ಪರಿಯನ್ನು ವಿವರಿಸಿ.

ಅಥವಾ

ಬ್ರಿಟಿಷರ ವಿರುದ್ಧ ಸಮರ ಸಾರಿದ ಕಿತ್ತೂರ ರಾಣಿ ಚೆನ್ನಮ್ಮನ ವಿರುದ್ಧ ನಡೆಸಿದ ಒಳಸಂಚೇನು?

27. ಪುರಂದರ ದಾಸರು ತಿಳಿಸಿರುವ ಮನಸ್ಸನ್ನು ಶೋಧಿಸುವ ವಿಧಾನಗಳನ್ನು ತಿಳಿಸಿರಿ.

ಅಥವಾ

'ಕೊನೆಗೆ ನಿನ್ನೊಳು ನೀ ಜಾಣೋ' ಎಂಬ ಮಾತನ್ನು ಕೀರ್ತನೆಯ ಬೆಳಕಿನಲ್ಲಿ ವಿವರಿಸಿ

**ಭಾಗ – 'ಬಿ'**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಬರೆಯಿರಿ. 12 * 1 = 12**

28. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ :

(ಎ) ಹದಿಮೂರು (ಬಿ) ಎರಡು (ಸಿ) ಒಂಬತ್ತು (ಡಿ) ಇಪ್ಪತ್ತೈದು

29. 'ಆಗಮಸಂಧಿ' ಪದಕ್ಕೆ ಇದು ಉದಾಹರಣೆ :

(ಎ) ಅತ್ಯಂತ (ಬಿ) ಮನೆಯನ್ನು (ಸಿ) ಬೆಟ್ಟದಾವರೆ (ಡಿ) ಅರಿವಿಲ್ಲ

30. ಅಂಕಿತನಾಮ ಪದಕ್ಕೆ ಉದಾಹರಣೆಯಿದು :

(ಎ) ಕಮಲಾಕ್ಷ (ಬಿ) ಪರ್ವತ (ಸಿ) ಪೂಜಾರಿ (ಡಿ) ಒಳ್ಳೆಯ

31. , ಬಿನದ ' ಪದದ ತತ್ಸಮ ರೂಪ :

(ಎ) ವರ್ಣನೆ (ಬಿ) ವಿನೋದ (ಸಿ) ಬಿನ್ನಾಣ (ಡಿ) ವಿಜ್ಞಾನ

32. 'ಆತ್ಮಾರ್ಥಕ ಸರ್ವನಾಮಪದಕ್ಕೆ ಉದಾಹರಣೆಯಿದು :

(ಎ) ಯಾರು (ಬಿ) ತಾವು (ಸಿ) ನೀನು (ಡಿ) ನಾನು

33. ವಿಜಾತಿ ಒತ್ತಕ್ಷರದಿಂದ ಕೂಡಿರುವ ಪದವಿದು :

(ಎ) ಅಪ್ಪನಿಲ್ಲದೆ (ಬಿ) ಜಾಸ್ತಿ (ಸಿ) ಕುಚ್ಚಲ (ಡಿ) ನಾಣ್ಣುಡಿ

34. 'ಭೂಮಿ' ಪದದ ಸಮಾನಾರ್ಥಕ ಪದ :

(ಎ) ಧರಣಿ (ಬಿ) ಮುಗಿಲು (ಸಿ) ಜಲಧಿ (ಡಿ) ನಭ

35. ಪಂಚಮಿ ವಿಭಕ್ತಿಯ ಪ್ರತ್ಯಯ :

(ಎ) ಗೆ (ಬಿ) ಅನ್ನು (ಸಿ) ದೆಸೆಯಿಂದ (ಡಿ) ಅಲ್ಲಿ

36. ಹೆಮ್ಮರ" ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

(ಎ) ತತ್ಪುರುಷ (ಬಿ) ಕ್ರಿಯಾ (ಸಿ) ದ್ವಿಗು (ಡಿ) ಕರ್ಮಧಾರಯ

37. ಮೀನು ನೀರಿನಲ್ಲಿ ಈಜುತ್ತದೆ – ಈ ವಾಕ್ಯವು

(ಎ) ಮಿಶ್ರವಾಕ್ಯ (ಬಿ) ಸಂಯೋಜಿತವಾಕ್ಯ (ಸಿ) ಸಾಮಾನ್ಯವಾಕ್ಯ (ಡಿ) ಅಪೂರ್ಣ ವಾಕ್ಯ

38. ಊರು ಉಪಕಾರ ಅರಿಯದು ; ಹೆಣ ಸಿಂಗಾರ ಅರಿಯದು – ಈ ವಾಕ್ಯಕ್ಕೆ ಬಳಸಿರುವ ಲೇಖನ ಚಿಹ್ನೆ :

(ಎ) ಅರ್ಧವಿರಾಮ (ಬಿ) ಉದ್ಧರಣ (ಸಿ) ಭಾವಸೂಚಕ (ಡಿ) ವಾಕ್ಯವೇಷ್ಟನ

39. " ಜೇನಿನಂತೆ ಸಿಹಿ " ಇಲ್ಲಿರುವ ಅಲಂಕಾರ :

(ಎ) ರೂಪಕ ಅಲಂಕಾರ (ಬಿ) ಶಬ್ದಾಲಂಕಾರ(ಸಿ) ಉಪಮಾ ಅಲಂಕಾರ (ಡಿ) ದೃಷ್ಟಾಂತ ಅಲಂಕಾರ

## ಭಾಗ – 'ಸಿ'

**ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1*4=4**

ಸ್ವತಂತ್ರ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ವಿಶ್ವೇಶ್ವರಯ್ಯ ಅವರು ವೈಜ್ಞಾನಿಕ ಅನ್ವೇಷಣೆಗಾಗಿ ಸ್ವಂತ ಖರ್ಚಿನಲ್ಲಿ ಜಪಾನ್, ಯುರೋಪ್ ಮತ್ತು ಅಮೇರಿಕಾ ದೇಶಗಳಿಗೆ ಭೇಟಿ ನೀಡಿದರು. ಪುಟಿಯುವ ಚೈತನ್ಯ, ನಾಳೆ ಮಾಡುವುದನ್ನು ಇಂದೇ ಮಾಡು, ಇಂದು ಮಾಡುವುದನ್ನು ಈಗಲೇ ಮಾಡಬೇಕೆಂಬ ತುಡಿತ ಅವರದಾಗಿತ್ತು. ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

**ಪ್ರಶ್ನೆಗಳು :**

40. ವಿಶ್ವೇಶ್ವರಯ್ಯ ಅವರು ಭೇಟಿ ನೀಡಿದ ದೇಶಗಳನ್ನು ಹೆಸರಿಸಿ?

41. ಹೈದರಾಬಾದ್ ನಗರದ ಎರಡು ನದಿಗಳನ್ನು ಹೆಸರಿಸಿ?

42. ಪುಟಿಯುವ ಚೈತನ್ಯರಾದ ವಿಶ್ವೇಶ್ವರಯ್ಯ ಅವರ ಕಾರ್ಯ ತತ್ಪರ ತುಡಿತ ಯಾವುದು?

43. ಹೈದರಾಬಾದ್ ನಗರವನ್ನು ಪ್ರವಾಹದಿಂದ ರಕ್ಷಿಸಲು ಏನು ಮಾಡಿದರು?

44. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 * 3 = 3

- ಹಾಸಿಗೆ ಇದ್ದಷ್ಟು ಕಾಲುಚಾಚು
- 'ಗಂಜೀಫು ಆಡುವವರಿಗೆ ಗಂಜಿಯೂ ಸಿಗದು
- ಕೈ ಕೆಸರಾದರೆ ಬಾಯಿ ಮೊಸರು

45. ನಿಮ್ಮ ಶಾಲೆಯ ವಾರ್ಷಿಕ ಕ್ರೀಡಾ ಕೂಟದ ಉದ್ಘಾಟನೆಗೆ ಆಗಮಿಸುವಂತೆ ಕೋರಿ ಜಿಲ್ಲಾ ಯುವಜನ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಯವರಿಗೆ ಮನವಿ ಪತ್ರ ಬರೆಯಿರಿ. 1 * 4 = 4

ಅಥವಾ

ನಿಮ್ಮನ್ನು ಬೆಂಗಳೂರಿನ ಲಯನ್ಸ್ ಪ್ರೌಢಶಾಲೆಯ ವಿದ್ಯಾರ್ಥಿ ಸುಜಯ್ ಎಂದು ಭಾವಿಸಿಕೊಂಡು ಹರಿಹರದಲ್ಲಿ ವಾಸವಾಗಿರುವ ಗೆಳೆಯ ಸಮೀರ್‌ಗೆ ಪ್ರವಾಸದ ವಿವರವನ್ನು ತಿಳಿಸಿ ಪತ್ರ ಬರೆಯಿರಿ

46. ಈ ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 1*4=4

- ರಾಷ್ಟ್ರೀಯ ಹಬ್ಬಗಳು
- ಬಾಹ್ಯಾಕಾಶ ವಿಜ್ಞಾನ
- ಸಂಪರ್ಕ ಮಾಧ್ಯಮಗಳು

----- 0 -----